# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕ... ಯ/ಅಪೀಲು/404/12-13

ದಿನಾಂಕ : 19-07-2016

ಉಪಸ್ಥಿತರು: ಶ್ರೀ ಲೋಕೇಶ್ ಪಿ.ಎನ್ (ಕ.ಆ.ಸೇ)

ಸಹಾಯಕ ಆಯುಕ್ತರು, ಬಳ್ಳಾರಿ.

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀಮತಿ ನೀಲಮ್ಮ ಗಂಡ ಶ್ರೀ ನಾರಾಯಣಪ್ಪ, ಶ್ರೀ ರಾಜೇಶ್ವರಿ ನಿಲಯ, ಮನೆ ನಂ 6, ವಾರ್ಡ್ ನಂ 25, ಎಲ್ ಎಲ್ ಎಲ್ ಸಿ ಕಛೇರಿ ಎದುರು, ಕಂಟೋನ್ಮೆಂಟ್, ಬಳ್ಳಾರಿ (ಶ್ರೀ ಜಮಾಲುದ್ದೀನ್ .ಜಿ. ವಕೀಲರು, ಬಳ್ಳಾರಿ) | 1.ತಹಶೀಲ್ದಾರರು, ಸಂಡೂರು |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಸಂಡೂರು | ದರೋಜಿ | 963/ಎ ಪೈಕಿ | 2.00 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಡಿಡಿಎಲ್ಆರ್, ಬಳ್ಳಾರಿ ಇವರ ಆದೇಶ ಸಂ/ಜಿ/ತಾಂ.ಸ/ಮೇಲ್ಮನವಿ 84/2010-11 ದಿನಾಂಕ 09/06/2011 ರ ಆದೇಶವನ್ನು ಕಾರ್ಯಗತಗೊಳಿಸದಿರುವುದರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 25-06-2013, 22-12-2015, 14-06-2016, ಮತ್ತು 19-07-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಅವರ ವಕೀಲರು ಮುಖಾಂತರ ಮೇಲ್ಮನವಿ ಸಲ್ಲಿಸಿ ತಾಂತ್ರಿಕ ಸಹಾಯಕರು ಮತ್ತು ಪದನಿಮಿತ್ತ ಭೂದಾಖಲೆಗಳ ಉಪನಿರ್ದೇಶಕರು , ಬಳ್ಳಾರಿ ಇವರ ನಡವಳಿಗಳು ಸಂಖ್ಯೆ ಜಿ.ತಾಂ.ಸ/ಮೇಲ್ಮನವಿ/84/2010-11 ದಿನಾಂಕ 09-06-2011ರ ಆದೇಶವನ್ನು ತಹಶೀಲ್ದಾರರು ಸಂಡೂರು ಇವರು ಕಾರ್ಯಾಗತ ಗೊಳಿಲ್ಲವೆಂದು ಸದರಿ ಆದೇಶದಂತೆ ಕ್ರಮ ವಹಿಸಲು ತಹಶೀಲ್ದಾಯುರು ಸಂಡೂರು ಇವರಿಗೆ ನಿರ್ದೇಶಿಸಬೇಕೆಂದು ಕೋರಿರುತ್ತಾರೆ.

ಮೇಲ್ಮನವಿಯೊಂದಿಗೆ ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ತಾಂತ್ರಿಕ ಸಹಾಯಕರು ಮತ್ತು ಪದನಿಮಿತ್ತ ಭೂದಾಖಲೆಗಳ ಉಪನಿರ್ದೇಶಕರು , ಬಳ್ಳಾರಿ ಇವರ ನಡವಳಿಗಳು ಸಂಖ್ಯೆ ಜಿ.ತಾಂ.ಸ/ಮೇಲ್ಮನವಿ/84/2010-11 ದಿನಾಂಕ 09-06-2011ರ ಆದೇಶದಲ್ಲಿ ಸಂಡೂರುತಾಲೂಕು ದರೋಜಿ ಗ್ರಾಮದ ಸ.ನಂ 963/ಎ ರಲ್ಲಿ ಲಭ್ಯವಿರುವ 81.36 ಎಕರೆ ವಿಸ್ತೀರ್ಣವಿದ್ದು ಪಹಣಿಯಂತೆ 91.63 ಎಕರೆ ಮಂಜೂರಾಗಿರುವುದರಿಂದ ಆಕಾರ್ ಬಂದ್ ವಿಸ್ತೀರ್ಣಕ್ಕೆ ತಾಳೆಯಿಟ್ಟುಕೊಂಡು ಮಂಜೂರಿದಾರರ ಅನುಭವ ಮತ್ತು ಮಂಜೂರಿದಾರರಿಗೆ ಮಂಜೂರಾದ ವಿಸ್ತೀರ್ಣಕ್ಕೆ ತಾಳೆಯಿಟ್ಟು ಹೊಸದಾಗಿ ಪೋಡಿ ಮಾಡುವಂತೆ ತಹಶೀಲ್ದಾರರು ಸಂಡೂರು ಇವರಿಗೆ ನಿರ್ದೇಶಿಸಿರುವುದು ಕಂಡು ಬರುತ್ತದೆ. ಸದರಿ ಆದೇಶವನ್ನು ಅನುಪಾಲನೆ ಮಾಡುವಂತೆ ಈ ನ್ಯಾಯಾಲಯದಿಂದ ದಿನಾಂಕ 19-07-2013 ರಂದು ತಹಶೀಲ್ದಾರರು ಸಂಡೂರು ಇವರಿಗೆ ಪತ್ರ ಬರೆಯಲಾಗಿದ್ದು, ಈ ವರೆವಿಗೂ ತಹಶೀಲ್ದಾರರು ಸಂಡೂರು ಇವರು ಕ್ರಮ ವಹಿಸಿರುವುದಿಲ್ಲ.ಕಾರಣ ಸದರಿ ಆದೇಶ ದಿನಾಂಕ 09-06-2011 ರ ಆದೇಶವನ್ನು ಕೂಡಲೆ ಕಾರ್ಯಾಗತ ಗೊಳಿಸಲು ತಹಶೀಲ್ದಾರರು ಸಂಡೂರು ಇವರಿಗೆ ಆದೇಶಿಸಿಸುವ ಈ ಕೆಳಕಂಡ ಆದೇಶ.

ಮುಂದಿನ ಪುಟಕ್ಕೆ.....

:: ಆದೇಶ ::

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಸಂಡೂರು ತಾಲ್ಲೂಕಿನ ದರೋಜಿ ಗ್ರಾಮದ ಸ.ನಂ 963/ಎ ಪೈಕಿ ವಿಸ್ತೀರ್ಣ: 2.00 ಎಕರೆ ಜಮೀನಿಗೆ ಸಂಬಂಧಿಸಿದಂತೆ ತಹಶೀಲ್ದಾರರು ಸಂಡೂರು ಇವರು ತಾಂತ್ರಿಕ ಸಹಾಯಕರು ಮತ್ತು ಪದನಿಮಿತ್ತ ಭೂದಾಖಲೆಗಳ ಉಪನಿರ್ದೇಶಕರು, ಬಳ್ಳಾರಿ ಇವರ ನಡವಳಿಗಳು ಸಂಖ್ಯೆ ಜಿ.ತಾಂ.ಸ/ಮೇಲ್ಮನವಿ/84/2010-11 ದಿನಾಂಕ 09-06-2011ರ ಆದೇಶವನ್ನು ಕಾರ್ಯಾಗತ ಗೊಳಿಸಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ, ಬರೆಯಿಸಿ, ತಪ್ಪುಗಳನ್ನು ತಿದ್ದಿ, ದಿನಾಂಕ: **19-07-2016** ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,
ಬಳ್ಳಾರಿ.

ಪ್ರತಿಯನ್ನು ವಾದಿಗಳಿಗೆ, ಹಾಗೂ ತಹಶೀಲ್ದಾರರು ಸಂಡೂರು ಇವರಿಗೆ ಸೂಕ್ತ ಕ್ರಮಕ್ಕಾಗಿ.